# ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ದಲ್ಲಿ, ಆಲೂರು .

## ಸಿ.ಸಿ.ಸಂಖ್ಯೆಃ 128/23

| | | |
|---|---|---|
| ಸಾಕ್ಷಿದಾರರ ಹೆಸರು | ನಾಗರಾಜ್ | ಸಿ.ಡಬ್ಲ್ಯೂಃ 3 |
| ಗಂಡನ / ತಂದೆ ಹೆಸರು | ರಂಗೇಗೌಡ | ಪಿ.ಡಬ್ಲ್ಯೂಃ 3 |
| ವಯಸ್ಸು | 42 ವರ್ಷ | |
| ಉದ್ಯೋಗ | ಖಾಸಗೀ | |
| ವಾಸಸ್ಥಳ | ಕಾಗನೂರು | |

ಪ್ರಮಾಣ ವಚನ ಬೋಧಿಸಲಾಯಿತು.

ದಿಃ 26.09.2025

**ಮುಖ್ಯ ವಿಚಾರಣೆಃ ಸಸಅ ರಿಂದ**

ಚಾಸಾ-1 ಮತ್ತು 4 ರವರ ಪರಿಚಯ ಇರುತ್ತದೆ. ಸಾಕ್ಷಿ ನಿಪಿ 1 ಮತ್ತು 4 ರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1ಬಿ, ನಿಪಿ 4ಬಿ ಎಂದು ಗುರುತಿಸಲಾಯಿತು. ನಾನು ದಿ.12.12.2022 ರಂದು ಚಾಸಾ 1 ರವರ ತೋಟದಲ್ಲಿ ಪೊಲೀಸರು ಕಡಿದಿರುವ ಗಿಡವನ್ನು ನನ್ನ ಮತ್ತು ಚಾಸಾ 4 ರವರ ಸಮಕ್ಷಮ ಅಮಾನತ್ತು ಪಡಿಸಿಕೊಂಡ ಸಮಯಲ್ಲಿ ಸಹಿ ಮಾಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಮು.ಮಾ.3 ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ನಾನು ದಿ.01.10.2022 ರಂದು ಚಾಸಾ 1 ರವರ ತೋಟದಲ್ಲಿ

ಪೊಲೀಸರು ಮಹಜರ್ ಮಾಡಿ ಎರಡು ಕತ್ತಿಯನ್ನು ನನ್ನ ಮತ್ತು ಚಾಸಾ 4 ರವರ ಸಮಕ್ಷಮ ಅಮಾನತ್ತು ಪಡಿಸಿಕೊಂಡ ಸಮಯಲ್ಲಿ ಸಹಿ ಮಾಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಮು.ಮಾ.1 ಮತ್ತು 2 ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಸಾಕ್ಷಿ ನಿಪಿ 2 ಎ ಮತ್ತು 2ಬಿ ಭಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ಮಹಜರ್ ಸಮಯದಲ್ಲಿ ಪೊಲೀಸರು ಸದರಿ ಭಾವಚಿತ್ರಗಳನ್ನು ತೆಗೆದಿರುತ್ತಾರೆ.

(ಈ ಸಂದರ್ಭದಲ್ಲಿ ಸ.ಸ.ಅ. ರವರ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲುಃ ಸಸಅ ರವರಿಂದಃ**

ಮು.ಮಾ.1 ಮತ್ತು 2ನ್ನು ದಿ. 09.10.2023 ರಂದು ಮಹಜರ್ ಮುಖಾಂತರ ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಸ್ಥಳವನ್ನು ಚಾಸಾ 2 ರವರು ತೋರಿಸಿರುತ್ತಾರೆ ಎಂದರೆ ಸರಿ. ಮಹಜರ್ ಅನ್ನು ಬೆ.10–10.30 ರವರೆಗೆ ಮಾಡಿರುತ್ತಾರೆ.

**ಪಾಟೀ ಸವಾಲುಃ ಕೆ ಜಿ ಎನ್ ವಕೀಲರಿಂದಃ**

ನಾನು ಕಾಗನೂರು ವಾಸ ಎಂದರೆ ಸರಿ. ಕಾಗನೂರಿನಿಂದ ಕುಡುದೆಲೆ ಗ್ರಾಮ 4 ಕಿ.ಮೀ. ಅಂತರದಲ್ಲಿರುತ್ತದೆ. ನಾನು ಚಾಸಾ 1

ರವರ ತೋಟದಲ್ಲಿ ಕೂಲಿ ಕೆಲಸ ಮಾಡುತ್ತೇನೆಯೇ ಎಂದರೆ ಇಲ್ಲ. ನಾನು ಕುಡುದೆಲೆ ಗ್ರಾಮದಲ್ಲಿ ವಾಸ ಇರುವುದಿಲ್ಲ ಎಂದರೆ ಸರಿ. ಸ್ಥಳಕ್ಕೆ ಯಾರು ಕರೆದಿರುತ್ತಾರೆ ಎಂದರೆ ವಿಷಯ ತಿಳಿದು ಮೊದಲನೇ ದಿನ ಮತ್ತು ಮಾರನೇ ದಿನ ಹೋಗಿರುತ್ತೇನೆ. ಮೊದಲನೇ ದಿನದ ದಿನಾಂಕ ಯಾವುದು ಎಂದರೆ 12.12.22. ದಿನಾಂಕ 12.12.22 ರಂದು ಎಷ್ಟು ಸಮಯಕ್ಕೆ ಹೋಗಿರುತ್ತೇನೆ ಎಂದರೆ ಸಂಜೆ 5–5.30. ಮಾರನೇ ದಿನ ಎಷ್ಟು ಸಮಯಕ್ಕೆ ಹೋಗಿರುತ್ತೇನೆ ಎಂದರೆ ಬೆ.10–10.30. ಮಾರನೇ ದಿನ ಹೊರತು ಪಡಿಸಿ ಪುನಃ ಹೋಗಿದ್ದೀರ ಎಂದರೆ ಇಲ್ಲ.

ನನ್ನ ಬಳಿ ಕಾಫಿ ತೋಟ ಇದೆ ಎಂದರೆ ಸರಿ. 40 ವರ್ಷದ ರೋಬಸ್ಟ ಕಾಫಿ ಗಿಡದ ಬುಡ ಎಷ್ಟು ದಪ್ಪ ಇರುತ್ತದೆ ಎಂದರೆ 4–6 ಇಂಚು. ಎಷ್ಟು ದಪ್ಪದ ಬುಡವನ್ನು ಕಡಿದಿರುವ ಗಿಡವಿತ್ತು ಎಂದರೆ 3–4 ಇಂಚು. ಎಷ್ಟು ಗಿಡಗಳನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ 2. ಸದರಿ 2 ಗಿಡಗಳ ಅಳತೆ ಎಷ್ಟು ಎಂದರೆ 3 ಇಂಚು. ನ್ಯಾಯಾಲಯದ ಮುಂದಿರುವ ಮು.ಮಾ.3 ತೋರಿಸಿ ಸದರಿ ಗಿಡವನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಇಲ್ಲ, 3 ಇಂಚಿನ ಗಿಡವನ್ನು ತೆಗೆದುಕೊಂಡು ಹೋಗಿರುತ್ತಾರೆ. ಪೊಲೀಸರು ಮಹಜರ್ ಗೆ ಬಂದಾಗ ಸ್ಥಳದಲ್ಲಿ ಕತ್ತಿ ಇತ್ತ ಎಂದರೆ ಇಲ್ಲ. ಮಾರನೇ ದಿನ ಬೆಳಿಗ್ಗೆ ಗಿಡಗಳನ್ನು ಕತ್ತಿರಿಸಿದಾಗ ಇತ್ತು. ಚಾಸಾ 2 ನನ್ನ ಸ್ನೇಹಿತರು.

ದಿ.12.12.22 ರಂದು ಪೊಲೀಸರು ಭಾವಚಿತ್ರ ತೆಗೆಸಿರುತ್ತಾರ

ಎಂದರೆ ಹೌದು. ನಾನು ಸ್ಥಳಕ್ಕೆ ಹೋಗಿರುವುದಿಲ್ಲ ಮತ್ತು ಪೊಲೀಸರು ನನ್ನ ಸಮಕ್ಷಮ ಮಹಜರ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 2 ನನ್ನ ಸ್ನೇಹಿತರಾಗಿರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕತ್ತಿಗಳನ್ನು ಪೊಲೀಸರಿಗೆ ಯಾರು ಕೊಟ್ಟಿರುತ್ತಾರೆ ಎಂದರೆ ಸ್ಥಳದಲ್ಲಿ ಬಿದ್ದಿರುವುದನ್ನು ತೆಗೆದುಕೊಂಡಿರುತ್ತಾರೆ. ಮತ್ತೊಂದು ದಿನ ಸಹ ಪೊಲೀಸರು ಸ್ಥಳಕ್ಕೆ ಬಂದಿರುವುದಿಲ್ಲ ಮತ್ತು ಕತ್ತಿಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಕತ್ತಿಗಳನ್ನು ಚಾಸಾ 2 ರವರು ನೀಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗಳಿಗೂ ಮು.ಮಾ.1 ರಿಂದ 3ಕ್ಕೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಶ್ರೀಮತಿ ಸ್ನೇಹ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಆಲೂರು .